# ಹೆಚ್ಚುತ್ತಿದೆ ಈ ಹುಚ್ಚು

# ಇ ಸಿಗರೇಟ್










**ತಂಬಾಕು ಸೇವನೆಗಿಂತ ಇ–ಸಿಗರೇಟ್ ಸೇವನೆ ಸುರಕ್ಷಿತ ಎನ್ನುವುದು ಈತನಕ ಸಾಬೀತಾಗಿಲ್ಲ. ಇತ್ತೀಚೆಗೆ ಯುವಕರ ದಂಡೇ ಇ–ಸಿಗರೇಟಿನತ್ತ ಆಕರ್ಷಿತವಾಗಿದೆ.**

■ ಚಿತ್ರ–ಲೇಖನ: **ದಿಲ್**

ತಂಬಾಕುವಿನ ಸಿಗರೇಟ್ ಸೇವನೆಯ ವ್ಯಸನದಿಂದ ಮುಕ್ತವಾಗಲು ಇ–ಸಿಗರೇಟ್ ಮೊರೆ ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಇ–ಸಿಗರೇಟ್ ಒಂದು ಸೇದುವ ಉಪಕರಣ. ಆಧುನಿಕ ಜೀವನಶೈಲಿಯ ಆವಿಷ್ಕಾರ. ಮಾಮೂಲಿ ತಂಬಾಕುವಿನಿಂದ ಮಾಡಿದ ಸಿಗರೇಟ್‌ಗಿಂತ ಭಿನ್ನ. ಇದಕ್ಕಿಂತ ಮುಂಚೆ ಕೊಂಚ ಮೆಕ್ಯಾನಿಕಲ್ ಆಗಿದ್ದ ಇ–ಸಿಗರೇಟ್ ಈಗ ಸಂಪೂರ್ಣ ಇಲೆಕ್ಟ್ರಾನಿಕ್‌ಮಯವಾಗಿದೆ.

ರಾಜ್ಯದ ಬೆಂಗಳೂರಿನಲ್ಲಿ ಇ–ಸಿಗರೇಟ್ ಇನ್ನೂ ವ್ಯಸನದಂತೆ ಹರಡಿಲ್ಲ. ಆದರೆ, ಯುವಜನರಲ್ಲಿ ಕ್ರೇಜ್ ಶುರುವಾಗಿದೆ. ಬಳಸುವವರ ಸಂಖ್ಯೆ ಹೆಚ್ಚಿದೆ. ರಾಜ್ಯದಲ್ಲಿ ಇದರ ಮಾರಾಟಕ್ಕೆ ನಿಷೇಧವಿರುವುದರಿಂದ ಸದ್ಯ ಮಾರುಕಟ್ಟೆಯಲ್ಲಿ ರಾಜಾರೋಷವಾಗಿ ಲಭ್ಯವಿಲ್ಲವಾದರೂ ಬೆಂಗಳೂರಿನ 'ನ್ಯಾಷನಲ್ ಮಾರುಕಟ್ಟೆ' ಅಥವಾ ಆನ್‌ಲೈನ್ ಮೂಲಕ ತರಿಸಿಕೊಳ್ಳಲಾಗುತ್ತಿದೆ.

ತಂಬಾಕು ಸೇವನೆಗಿಂತ ಇ–ಸಿಗರೇಟ್ ಸೇವನೆ ಸುರಕ್ಷಿತ ಎನ್ನುವುದು ಈತನಕ ಸಾಬೀತಾಗಿಲ್ಲ. ಇದರ ಬಗ್ಗೆ ಅಂತರರಾಷ್ಟ್ರೀಯ ವೈದ್ಯಕೀಯ

(8ನೇ ಪುಟ ನೋಡಿ)